ಕಾಲೋನಿಯ ರಾಮ ಮಂದಿರದಲ್ಲಿ. ಅದು ನಾನು ಮೊಟ್ಟಮೊದಲಿಗೆ ನಾಡಿಗರ ವೇದಿಕೆಯ ಭಾಷಣವನ್ನು ಕೇಳಿದ ಅನುಭವ. ಬೇಂದ್ರೆಯ ಬಗ್ಗೆ ಅಪಾರ ಗೌರವವಿದ್ದ ನನಗೆ ನಾಡಿಗರ ಮಾತು ಪಥ್ಯವಾಗುವಂತಿರಲಿಲ್ಲ. ಆದರೆ ಬೇಂದ್ರೆಯ ಕೊನೆಕೊನೆಯ ಪದ್ಯಗಳ ಬಗ್ಗೆ ನಾಡಿಗ ತರ್ಕಬದ್ಧವಾಗಿ ಎತ್ತುತ್ತಿದ್ದ ಪ್ರಶ್ನೆಗಳಿಗೆ ನನ್ನಲ್ಲಿ ಉತ್ತರವೂ ಇರಲಿಲ್ಲ. ಕೊಳದಲ್ಲಿ ಅಲೆಗಳನ್ನು ಎಬ್ಬಿಸಿಯೇ ತೀರುವೆ ಎನ್ನುವ ಹಟದ ತುಂಟ ಹುಡುಗನಂತೆ ನಾಡಿಗ ನನಗೆ ಕಂಡಿದ್ದರು.

ನಾಡಿಗರ ವ್ಯಕ್ತಿತ್ವದಲ್ಲಿ ಸುಲಭವಾಗಿ ವಿವರಿಸಲಾಗದ ವಿಚಿತ್ರ ಆಕರ್ಷಣೆಯಿತ್ತು. ನಮ್ಮ ಪರಿಚಯ ನಿಕಟವಾಗುತ್ತಾ ಹೋಯಿತು. ಅವರ ಗಾಂಧಿಬಜಾರಿನ ಪುಸ್ತಕದ ಅಂಗಡಿಯ

